ದಿನಾಂಕ : 22-08-2019 ಓ ಎಸ್ ನಂ. 90/2017

ಪಿ. ಡಬ್ಲ್ಯೂ - 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 1, 3, 5 ರಿಂದ 8 ನೇ ಪ್ರತಿವಾದಿ ಪರ ವಕೀಲರಿಂದ

ದಾವಾದ ಆಸ್ತಿಯು ಕಲ್ಲೂರ ಗ್ರಾಮದ ತಿಗಡಿ ರಸ್ತೆಗೆ ಹೊಂದಿಕೊಂಡು ಇರುತ್ತದೆ. ದಾವಾದ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ. ಕಳೆದ 30 ವರ್ಷಗಳಿಂದ ದಾವಾದ ಆಸ್ತಿಯು ಪ್ರತಿವಾದಿಯರ ಕಬ್ಜೆಯಲ್ಲಿ ಇದೆ ಎಂದರೆ ಸಾಕ್ಷಿಯು ವಾಟ್ನಿ ಆದ ಪ್ರಕಾರ ಅವರವರ ಪಾಲಿನ ಕಬ್ಜೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ವಾಟ್ನಿ ಆದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ದಾವಾದ ಆಸ್ತಿಯು ರಾಮಚಂದ್ರ ಶಿಂಧೆ ಇವರು ಖರೀದಿಸಿದ ಆಸ್ತಿ ಎಂದರೆ ಸರಿ. ರಾಮಚಂದ್ರ ಶಿಂಧೆ ಇವರಿಗೆ ಸುಬ್ಬರಾಯಪ್ಪ, ಭೀಮರಾಯಪ್ಪ, ಹನುಮಂತಪ್ಪ, ಅಪ್ಪಯ್ಯಪ್ಪ, ಭೀಮಶೆಪ್ಪ ಮತ್ತು ಕಲ್ಲಪ್ಪ ಅಂತಾ 6 ಜನ ಮಕ್ಕಳು ಎಂದರೆ ಸರಿ. ರಾಮಚಂದ್ರಪ್ಪ ಶಿಂಧೆ ಇವರಿಗೆ ಕಲ್ಲೂರು ಗ್ರಾಮದ ಸರ್ವೆ ನಂ. 96/1+ಅ+1 ಬ+1 ಬ+3 ಅ+3 ಬ+4 ಬ/1 ಬ ಸರ್ವೆ ನಂ 96/4 ಅ, 97/2 ಬ/2+2 ಬ/1 ಬ, 97/2 ಬ/2 ಅ ಎಂದು ಇರುವ ಆಸ್ತಿಗಳು ರಾಮಚಂದ್ರಪ್ಪ ಶಿಂಧೆ ಈತನ 6 ಮಕ್ಕಳ ಪಾಲಿಗೆ ಬಂದಿವೆ ಎಂದರೆ ಸರಿ. ರಾಮಚಂದ್ರಪ್ಪ ಶಿಂಧೆ ಈತನ ಮೊಮ್ಮಗನಾದ ರಾಮಚಂದ್ರಪ್ಪ ಭೀಮಶೆಪ್ಪ ಶಿಂಧೆ ಎಂಬುವವನು ಈ ಆಸ್ತಿಗಳಲ್ಲಿ ಪಾಲು ಬೇಕು ಎಂದು ಅ.ದಾ.ನಂ. 279/2017 ರಲ್ಲಿ ಪ್ರಧಾನ ಸಿವಿಲ್ ನ್ಯಾಯಾಲಯ ಬೈಲಹೊಂಗಲದಲ್ಲಿ ದಾವೆ ಮಾಡಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿ ಈ ದಾವೆಯ ಪ್ರತಿವಾದಿ ನಂ.1 ರಿಂದ 8 ರವರು ಪಕ್ಷಗಾರರು ಇದ್ದಾರೆ ಎಂದರೆ ಸರಿ. ರಾಮಚಂದ್ರಪ್ಪ ಭೀಮಶೆಪ್ಪ ಶಿಂಧೆ ಇವರು ಮೇಲೆ ಹೇಳಿದ ಆಸ್ತಿಗಳಲ್ಲಿ ಪಾಲು ಆಗಿಲ್ಲ ಎಂದು ದಾವೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಈಗಾಗಲೇ ವಾಟ್ನಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ದಾವಾದ ಆಸ್ತಿಗೆ ಸಂಬಂಧಿಸಿದ ಎಲ್ಲ ಪಕ್ಷಗಾರರನ್ನು ನಾನು ದಾವಾದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ರಾಮಚಂದ್ರಪ್ಪ ಶಿಂಧೆ ಈತನಿಗೆ ಸಂಬಂಧಿಸಿದ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಉಳಿದ ಆಸ್ತಿಗಳಲ್ಲಿ ಈಗಾಗಲೇ ವಾಟ್ನಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಇರುವ ಆಸ್ತಿಯು ಅ.ದಾ. ನಂ. 279/2017 ರಲ್ಲೂ ಸಹ ಇದೆ ಎಂದರೆ ಸರಿ. ನಾನು ಕಳೆದ 30 ರಿಂದ 40 ವರ್ಷಗಳಿಂದ ಕಲ್ಲೂರು ಬಿಟ್ಟಿದ್ದೇವೆ ಎಂದರೆ ಸಾಕ್ಷಿಯು ನಾವು ಹೋಗಿ ಬಂದು



ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ತಾಯವ್ವ ಇರುತ್ತದೆ. ನಮ್ಮ ತಾಯಿಯು ನನ್ನ ತಂದೆಯ ವಿರುದ್ಧ ಕೇಸು ಮಾಡಿ ತನಗೆ ಆಸ್ತಿಯಲ್ಲಿ ಪಾಲು ಬೇಡ ಎಂದು ಹಣ ಮತ್ತು ಬಂಗಾರ ತೆಗೆದುಕೊಂಡು ಕಲ್ಲೂರು ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಬರಬೇಕಾದ ಪಾಲನ್ನು ಈಗಾಗಲೇ ನಮ್ಮ ತಾಯಿಯವರು ಹಣ ಮತ್ತು ಬಂಗಾರದ ರೂಪದಲ್ಲಿ ತೆಗೆದುಕೊಂಡಿದ್ದರಿಂದ ದಾವಾದ

ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿ ಮತ್ತು ಉಳಿದ ಆಸ್ತಿಗಳಲ್ಲಿ ಇಲ್ಲಿಯವರೆಗೂ ಯಾವುದೇ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ಆ ಎಲ್ಲಾ ಆಸ್ತಿಗಳು ರಾಮಚಂದ್ರಪ್ಪ ಶಿಂಧೆ ಈತನ 6 ಜನ ಮಕ್ಕಳ ಹೆಸರಿನಲ್ಲಿ ಜಂಟಿಯಾಗಿ ಇವೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪನ ಈತನ 6 ಜನ ಮಕ್ಕಳು ಮತ್ತು ಮೊಮ್ಮಕ್ಕಳು ಅಪಸಾತ ವಾಟ್ನಿಯ ಮೇಲೆ ತಮ್ಮ ಪಾಲಿನ ಆಸ್ತಿಗಳನ್ನು ವಹಿವಾಟು ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸಾಕ್ಷಿಯು ಈಗಾಗಲೇ ಆ ಆಸ್ತಿಗಳ ಮೇಲೆ ವಾಟ್ನಿ ಆಗಿದೆ ಎಂದು ನುಡಿಯುತ್ತಾರೆ. ಯಾವುದೇ ವಾಟ್ನಿ ಆಗದೇ ಇದ್ದರೂ ಸಹ ಮೇಲೆ ಹೇಳಿದ ಆಸ್ತಿಗಳಿಗೆ ಸಂಬಂಧಿಸಿದಂತೆ ವಾಟ್ನಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಇನ್ನೊಬ್ಬ ಹೆಂಡತಿಯ ಮಕ್ಕಳಿಗೆ ಮತ್ತು 2 ನೇ ಹೆಂಡತಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಈ ಖೊಟ್ಟಿ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 2 ನೇ ಪ್ರತಿವಾದಿ ಪರ ವಕೀಲರಿಂದ</u>

2 ನೇ ಪ್ರತಿವಾದಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**